ನೋಟ ಹರಿಸಿದೆ. ಯಾಕೋ ಎಲ್ಲವೂ ಇದ್ದು ಏನೂ ಇಲ್ಲದ ಶೂನ್ಯ ನನ್ನನ್ನು ಆವರಿಸುತ್ತಿತ್ತು. ಒಂದು ಕಾಲದಲ್ಲಿ ತುಂಬಿ ತುಳುಕುತ್ತಿದ್ದ ದೊಡ್ಡಪ್ಪನ ಮನೆ ಶಿಥಿಲಾವಸ್ಥೆಗೆ ಬಂದು ಬಿದ್ದಿದೆ. ಅಲ್ಲಿಂದಲ್ಲಿಗೆ ತೇಪೆ ಹಚ್ಚಿ ನಿರ್ಗತಿಕರಂತೆ ಆ ಮನೆಯವರು, ಆ ಮನೆ ಯಾವುದೋ ದುರಂತ ಕಥೆಯ ಮುನ್ನುಡಿ ಬರೆದ ಸ್ಮಾರಕದಂತೆ ಕಾಣುತ್ತಿದೆ. ಮನಸ್ಸು ಆರ್ದ್ರವಾಯಿತು.

'ಪಾಪ...! ಆ ಹುಡುಗಿ ಹೋಗೆ ಬಿಟ್ಟಿತು' ಅಮ್ಮ ಪದ್ಮಾ ಬಗ್ಗೆ ಎಲ್ಲಾ ಹೇಳಿ ಮುಗಿಸಿದಾಗ ಮನಸ್ಸು ಇನ್ನಷ್ಟು ಮುದುಡಿತು. ಸಣ್ಣಪುಟ್ಟ ವಿಷಯಗಳು ನಮ್ಮನ್ನು ಕಾಡಿದಷ್ಟು ದೊಡ್ಡ ದೊಡ್ಡ ಸಂಗತಿಗಳು ನಮ್ಮನ್ನು ಕಾಡಲಾರವು. ಪದ್ಮಾ ಸತ್ತದ್ದಕ್ಕೂ ಅವಳ ಅಕ್ಕ ಶುಭಾ ಹೊಟ್ಟೆ ಇಳಿಸಿಕೊಂಡದ್ದಕ್ಕೂ ಕಾರಣವಿತ್ತಂತೆ. ಯಾವನೋ ಒಬ್ಬ ಯಕ್ಷಗಾನದ ಹಾಡು ಹೇಳಿಕೊಡುವುದಕ್ಕೆ ಬರುತ್ತಿದ್ದನಂತೆ. ಅವನೇ ಕಾರಣವಂತೆ... ಹಾಗೇ ಅಮ್ಮನ ಮಾತುಗಳನ್ನು ನಾನು ಮೆಲುಕು ಹಾಕುತ್ತಿರುವಂತೆ... ಮತ್ತೆ ಸಂಬಂಧದದ್ದೇ ವಿಷಯಗಳು ತೆರೆದುಕೊಂಡವೆನಿಸಿ... ಪ್ರಣೀತಾ ಗಣೇಶ, ಪ್ರಣೀತಾ ನಾನು... ನಮ್ಮ ನಡುವಿನ ಸಂಬಂಧ ಯಾವುದು? ಮೋಹವೇ, ಪ್ರೀತಿಯೇ, ಕಾಮವೇ...? ಪ್ರಶ್ನೆಗಳಾಗಿಯೇ ಉಳಿಯಿತೆನಿಸಿತು.

'ಅದು ಏನೇ ಆಗಲಿ. ನಾನು ಅದ್ರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ನೀನು ನನಗೆ ಬೇಕು ಅಂದ್ರೆ ಬೇಕೇ. ಏನಾದರೂ ಹೆಚ್ಚು ಕಡಿಮೆ ಆದರೂ ನಾನು ಪರ್ಮನೆಂಟ್ ಆಗಿ ನಿನ್ನ ಹತ್ರನೇ ಇರ್ತೇನೆ' ಪ್ರಣೀತಾಳ ಮಾತುಗಳು ನನ್ನನ್ನು ಎತ್ತಿ ಒಗೆದಂತಾಯಿತು. ಹಾಗೆ ನೋಡುವುದಾದರೆ ಅವಳಿಗೆ ನನ್ನಿಂದ ಏನೂ ಬೇಕಾಗಿರಲಿಲ್ಲ ಅನಿಸುತ್ತದೆ. ಕೇವಲ ಕಾಲೇಜಿನ ಗೆಳೆಯರು ಅನ್ನುವ ಆತ್ಮೀಯತೆಯೊಂದೇ ಇರಲಾರದು. ನನ್ನಿಂದ ಅವಳು ನಿರೀಕ್ಷಿಸುವುದೇನು ಎನ್ನುವುದು ನನಗೂ ಗೊತ್ತು. ನಾನು ನಿರಾಕರಿಸಿದರೆ ಅದರ ಪರಿಣಾಮವೇನು ಎನ್ನುವುದೂ ನನಗೆ ತಿಳಿದಿದೆ. ಮುಳ್ಳಿನ ಮೇಲೆ ಹಾಸಿದ ಬಟ್ಟೆಯ ಹಾಗೆ ಆ ನಿರಾಕರಿಸಲಾಗದ ವಿಷಯ. 'ಮದುವೆಯಾಗಿದೆ, ಗಂಡ ಇದ್ದಾನೆ ಆದ್ರೂ ಇದು...' ಅದೆಷ್ಟೋ ಬಾರಿ ಕೇಳಬೇಕೆನ್ನುವ ಪ್ರಶ್ನೆಗೆ, ಪ್ರಶ್ನೆ ಕೇಳುವ ಮೊದಲೇ ನಾವಿಬ್ಬರೂ ಹಾಸಿಗೆಯಲ್ಲಿರುವಾಗ, 'ಇದು ನನ್ನ ಖಾಸಗಿ ವಿಷಯನ. ನೀನಾಗಲಿ ನನ್ನ ಗಂಡನಾಗಲಿ ಇದನ್ನು ಕೇಳುವ ನೈತಿಕ ಹಕ್ಕು ನಿಮಗಿಲ್ಲ' ಬಾಯಿಗೆ ಬೀಗ ಜಡಿದು ಖಾಸಗಿತನದ ಹಕ್ಕನ್ನು ಪ್ರತಿಪಾದಿಸುತ್ತಾ ವೈಚಾರಿಕ ಸ್ವಾತಂತ್ರ್ಯದ ಕೀಲಿ ಕೈಯನ್ನು ಜೋಪಾನವಾಗಿ ಇಟ್ಟುಕೊಂಡವಳಂತೆ ನಕ್ಕಳು. ನನಗೂ ಅವಳ ಸಾಂಗತ್ಯ ಅಸಹ್ಯವೆನಿಸಿದ್ದಿಲ್ಲ. ನನ್ನ ಭಾವನೆಗಳನ್ನು ಕೆದಕಿ ಇಪ್ಪತ್ತು ವರ್ಷಗಳಷ್ಟು ನನ್ನನ್ನು ಸಣ್ಣವನನ್ನಾಗಿ ಮಾಡುತ್ತಿತ್ತು ಅವಳ ಸನಿಹ. ಆದರೆ ನನ್ನೊಳಗೊಂದು ಭಯವಿತ್ತು. ಕೇಳಬಾರದೆಂದುಕೊಂಡರೂ ಮಾತು ಹೊರಗೆ ಬಂತು, 'ನಿನ್ನ ಗಂಡನಿಗೆ ಈ ವಿಷಯ ಗೊತ್ತಾದರೆ?'

'ಬಾಯಿ ಮುಚ್ಕೋ... ಎಲ್ಲಿ ಸಿಗುವುದಿಲ್ಲವೋ ಅದನ್ನು ಪಡೆದುಕೊಳ್ಳುವ ಹಕ್ಕು ಹೆಣ್ಣಿಗಿಲ್ಲವಾ?' ನನ್ನನ್ನೇ ನಾನು ಪರಾಮರ್ಶಿಸಿಕೊಂಡು ಸುಮ್ಮನಾಗಿ ಬಿಟ್ಟೆ. ಅವಳನ್ನು ನಾನು ಪ್ರಶ್ನಿಸುವ ಮೊದಲು ಅದೇ ಪ್ರಶ್ನೆಯನ್ನು ನಾನು ನನಗೇ ಕೇಳಿಕೊಳ್ಳಬೇಕಿತ್ತು ಅನಿಸದಿರಲಿಲ್ಲ. ತಪ್ಪಿತಸ್ಥಭಾವ ನನ್ನಲ್ಲಿಲ್ಲದಿದ್ದರೂ ನಾನು ಗಂಭೀರವಾಗಿ ಕುಳಿತಿರಲಾರದೆ ಮುಗುಳ್ನಕ್ಕೆ. ಅವಳ ಮುಖ ಗಂಭೀರವಾಗಿತ್ತು. ನನ್ನ ನಗು ಕಂಡು ಏನನಿಸಿತೋ, ಗೊಂದಲಕ್ಕೊಳಗಾದಳು.

'ಖಾಸಗಿತನದ ಹಕ್ಕಿನ ಬಗ್ಗೆ ತಿಳಿದುಕೊಂಡಿರುವೆ' ಎಂದೆ. ಗಂಭೀರ ಮುಖ ತಿಳಿ ನಗುವಿನೊಂದಿಗೆ ಕೊನೆಯಾಯಿತು.

'ಕಾನೂನು ನನಗಿಂತಲೂ ನಿನಗೆ ಚೆನ್ನಾಗಿ ಗೊತ್ತಿಲ್ಲದ್ದನಾ? ನಿನ್ನ ಹೆಂಡ್ತಿ ಲಾಯರ್ ಅಲ್ವಾ? ಅವಳನ್ನೇ ಕೇಳು... ಸಂವಿಧಾನದ ಇಪ್ಪತ್ತೊಂದನೇ ವಿಧಿ ಏನು ಹೇಳುತ್ತೇಂತ?' ಕಾನೂನು, ವೈಚಾರಿಕತೆ, ತರ್ಕ ಇವೆಲ್ಲದರಲ್ಲಿಯೂ ನಾನು ಬೋಳೆ ಸ್ವಭಾವದವನೆ. ಅದರ ಅಗತ್ಯವೇ ನನಗೆ ಬೇಕೆನಿಸಿರಲಿಲ್ಲ.

'ಅದರ ಅಗತ್ಯ ಉಂಟನಾ? ಅದನ್ನು ಹಿಡ್ಕೊಂಡು ನೀನು ಟ್ರ್ಯಾಪ್ ಮಾಡ್ತೀಯಾ?' ಚುಡಾಯಿಸುವಂತೆ ಕೇಳಿದೆ. ಅವಳ ಮುಖದ ನಗು ಮಾಯವಾಯಿತು.

'ನಿನ್ನನ್ನು ಟ್ರ್ಯಾಪ್ ಮಾಡುವುದರಲ್ಲಿ ನನಗೇನು ಅರ್ಥ ಕಾಣಿಸುವುದಿಲ್ಲ. ನನ್ನ ಖಾಸಗಿತನದ ಬದುಕನ್ನು ಯಾರೂ ಪ್ರಶ್ನಿಸುವ ಹಾಗಿಲ್ಲ. ಸಂವಿಧಾನದ ಇಪ್ಪತ್ತೊಂದನೇ ವಿಧಿ ಕೂಡ ಇದನ್ನೇ ಹೇಳೋದು. ಜೀವಿಸುವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಇದು. ಈ ಹಕ್ಕಿನಲ್ಲಿಯೇ ಖಾಸಗಿತನದ ಹಕ್ಕು ಕೂಡ ಅಂತರ್ಗತವಾಗಿದೆ ಅದರಲ್ಲಿ. ಅದಕ್ಕೆ ನನಗೆ ಬೇಕಾದದ್ದನ್ನು ನಾನು ಪಡೆದುಕೊಳ್ಳುವ ಹಕ್ಕು ನನಗಿಲ್ಲವೇ? ನಿನ್ನ ಹಾಗೆ...' ಅವಳ ಮಾತುಗಳನ್ನು ನಿರಾಕರಿಸಲಾರದಾದೆ. ಅವಳ ಮುಖದಲ್ಲಿಯೂ ಸಮಜಾಯಿಷಿ ನೀಡಿದ ನಿರಾಳತೆಯಿತ್ತು.

ಆ ದಿವಸ ಕೂಡ ಹೀಗೆ ಭೂಮಿ ಭಾನು ಒಂದಾಗುವ ಹಾಗೆ ಮಳೆ ಸುರಿಯುತ್ತಿತ್ತು. ಗದ್ದೆ ಯಾವುದು ತೋಡು ಯಾವುದು ಗೊತ್ತಾಗದಷ್ಟು ಕೆಸರು ನೀರು ತುಂಬಿ ಹರಿಯುತ್ತಿತ್ತು. ಮನೆಯಲ್ಲಿ ಶ್ರಾದ್ಧ ಕಾರ್ಯಕ್ರಮ. ಮಡಿ ಬಟ್ಟೆಗಳನ್ನು ಎತ್ತಿಕೊಂಡು ತೋಡಿಗೆ ಹೋಗಿದ್ದ ಅಜ್ಜಿಯನ್ನು ಬೊಳ್ಳದ ನೀರು ಎಳೆದುಕೊಂಡು ಹೋಗಿತ್ತು. ಅಜ್ಜ ಬೊಳ್ಳದ ಸಮೀಕ್ಷೆ ನಡೆಸುವುದಕ್ಕೆ ಅಡ್ಡ ಪಂಚೆ ಕಟ್ಟಿಕೊಂಡು ಗೊರಬು ಹಾಕಿಕೊಂಡು ಹೊರಟವರಿಗೆ ಕೇದಿಗೆ ಬಲ್ಲೆಯಲ್ಲಿ ಕೆಂಪು ಬಟ್ಟೆ ಕಾಣುವುದನ್ನು ಕಂಡು ಹತ್ತಿರ ಹೋದವರಿಗೆ ಕಂಡದ್ದು ಅಜ್ಜಿಯ ಹೆಣ. ಬೊಳ್ಳ ಇಳಿಯದೆ ಹೆಣ ತೆಗೆಯುವ ಹಾಗಿರಲಿಲ್ಲ. ಹಾಗೆಯೇ ಬಿಟ್ಟರೂನೂ ಬೊಳ್ಳ ಎಲ್ಲಿ ಹೆಣವನ್ನು ಎಳೆದುಕೊಂಡು ಹೋಗುತ್ತದೆಯೆನ್ನುವ ಭಯ. ಅಂತೂ ಕಣ್ಣಿಗೆ ಕಾಣುವ ಹಾಗಿದ್ದರೂ ಅಜ್ಜಿಯ ಹೆಣವನ್ನು ತೆಗೆಯಲು ಎರಡು ದಿನ ಕಾಯಬೇಕಾಯಿತಂತೆ. ಎಂತಹ ಎದೆಗಾರಿಕೆಯವನಿಗೂ ಆ ತೋಡಿನ ಬೊಳ್ಳವೆಂದರೆ ಎದೆ ನಡುಗಿಸಿ ಬಿಡುವಂತೆ ಇತ್ತಂತೆ. ಅಮ್ಮ ನನಗೆ ಹೇಳಿದ ಸಂಗತಿ ಇದು. ಅಜ್ಜಿಯ ದುರ್ಮರಣವೇ ಶುಭಾ ಅಡ್ಡದಾರಿ ಹಿಡಿಯುವುದಕ್ಕೆ ಕಾರಣವಂತೆ. ದೊಡ್ಡಪ್ಪನಿಗೆ ಯಕ್ಷಗಾನದ ಹುಚ್ಚಿತ್ತಲ್ಲ. ಅವರಿಗೆ ಭಾಗವತಿಕೆ ಕಲಿಸಿಕೊಡುವುದಕ್ಕೆ ಅಂಜನಪ್ಪ ಬರುತ್ತಿದ್ದ. ಅವನ ಹಾಡಿಗೆ ಶುಭಾ ಸೋತಿದ್ದಳಂತೆ. ಆದರೆ ಅವನಿಗೆ ಪದ್ಮಾಳ ಮೇಲೆ ಕಣ್ಣಿತ್ತೂಂತ ಶುಭಾಳಿಗೆ ಗೊತ್ತಾಗಿ, ಶುಭಾ ಅವನ ಜೊತೆಗೆ ಓಡಾಡ ತೊಡಗಿದಳಂತೆ. ಅವನೂ ಯೌವನಸ್ಥ. ಬೆಣ್ಣೆ ಬಿಸಿಯಾಯ್ತು. ಕರಗಿ ಬಿಟ್ಟಿತು. ಶುಭಾ ಬೇರೆ ದಾರಿ ಕಾಣದೆ ಹೊಟ್ಟೆ ಇಳಿಸಿಕೊಳ್ಳುವ ಪರಿಸ್ಥಿತಿ ಬಂತು. ಅವಳು ಹಾರಾಡಿ, ಬೈದಾಡಿದ್ದು ಪದ್ಮಾಳನ್ನು. ಇದರಿಂದ ನೊಂದ ಪದ್ಮಾ ಆತ್ಮಹತ್ಯೆ ಮಾಡಿಕೊಂಡಳು ಅನ್ನೋದು ಕೂಡ ನನಗೆ ಅಮ್ಮನೇ ಹೇಳಿದ್ದು. ಆದರೆ ನಿಜ ಕಥೆ ಬೇರೆಯದಂತೆ.

ಕಾಮ ಎನ್ನುವುದು ಒಂದು ದೊಡ್ಡ ಕೊರಕಲು. ಇದನ್ನು ತುಂಬುವುದೇ ಅಸಾಧ್ಯ. ಕಾಮ ಎನ್ನುವುದು ಎಂದಿಗೂ ತಣಿಯದ ಬೆಂಕಿ. ಸಂಸಾರದಲ್ಲಿ ಮೋಹಿತನಾದಷ್ಟೇ ಯಜ್ಞಕ್ಕೆ ಹಾಕಿದ ತುಪ್ಪದ ಹಾಗೆ ಹೆಚ್ಚೆಚ್ಚು ಪ್ರಜ್ವಲಿಸುತ್ತಲೇ ಇರುತ್ತದೆ. ಕಾಮ ಒಂದು ರೋಗ. ಇದನ್ನು ನಿವಾರಿಸಿ ಕೊಳ್ಳಲು ಸಾಧ್ಯವೇ ಆಗದು. ಇಂದ್ರಿಯ ಶಿಥಿಲವಾಗಬಹುದು. ಆದರೆ ಕಾಮಾಪೇಕ್ಷೆ ಅಗಾಧವಾಗಿ, ನಿರಂತರವಾಗಿ ಉಳಿದೇ ಬಿಡುತ್ತದೆ. ಪುರುವಿನಿಂದ ಯೌವನವನ್ನು ಪಡೆದ ಯಯಾತಿ ಕೊನೆಗೆ ದೇವಯಾನಿಗೆ ಹೇಳಿದ ಸರ್ವಕಾಲಿಕ ಸತ್ಯ ಇದು. ಇದು ನೆನಪಾಗುತ್ತಲೇ ನನ್ನನ್ನು ಅಳ್ಳಾಡಿಸಿ ಬಿಟ್ಟಿತು. ಪ್ರಣೀತಾ ನನ್ನಿಂದ ಬಯಸುತ್ತಿರುವುದು ಇದೇ ಕಾಮವನ್ನಲ್ಲವೇ? ನನ್ನ ಬುದ್ಧಿಗೇಕೆ ಮಂಕು ಬಡಿದಿತ್ತು? ಪ್ರಣೀತಾ, 'ನಿನ್ನ ಹಾಗೆ' ಅಂದಿದ್ದಕ್ಕೆ ನಾನೇನು ಪ್ರತಿಕ್ರಿಯಿಸದಾದೆ. ಇಲ್ಲಿ ನನ್ನ ಖಾಸಗಿತನದ ಪ್ರಶ್ನೆ ಇತ್ತಲ್ಲ? ಇದಕ್ಕಾಗಿಯೇ ಏನೋ ಸಂಬಂಧಗಳ ಬಗ್ಗೆ ವಿಪರೀತ ಆಲೋಚಿಸುವ, ತರ್ಕಿಸುವ, ವಾದ ಮಾಡುವ ಯಾವ ಹುಂಬತನವೂ ನನ್ನದಾಗಿರದ್ದು. ಮತ್ತೆ ನಾನು ಈ ಸಂಬಂಧದ್ದೇ ವಿಷಯಗಳನ್ನು ಪ್ರಸ್ತಾಪಿಸುವಾಗಲೂ ನನ್ನ ಬುದ್ಧಿ ಮತ್ತಷ್ಟು ಮಂಕಾಗಿ ಬಿಡುವುದು.



### ವ್ಯತ್ಯಾಸ

ಗೆದ್ದರೆ ನೀ
ನೀ ಯಾರೆಂದು
ಎಲ್ಲರಿಗೂ ಗೊತ್ತಾಗುತ್ತೆ!
ಸೋತರೆ ನೀ
ನಿನ್ನವರು ಯಾರೆಂದು
ನಿನಗೆ ಗೊತ್ತಾಗುತ್ತೆ!

★ ದ್ವಾರನಕುಂಟೆ ಪಾತಣ್ಣ